ಕಲ್ಪನೆಗಳಾಗಿಬಿಡಬೇಕು. ನೀವು ಹೆಚ್ಚೆಚ್ಚು ಸಾಧಿಸಿದಷ್ಟೂ ನಿಮ್ಮ ಕಲ್ಪನೆಗಳು ಹೆಚ್ಚೆಚ್ಚು ಗರಿಗೆದರಿಕೊಂಡು ಬೆಳೆಯುತ್ತಾ ಹೋಗುತ್ತವೆ! ಏಕೆಂದರೆ ನಮ್ಮ ಕಲ್ಪನೆಗಳು ಯಾವಾಗಲೂ ನಮಗಿರುವ ನುಡಿಸುವ ಅಥವಾ ಹಾಡುವ ಸಾಮರ್ಥ್ಯಕ್ಕೆ ಸೀಮಿತಗೊಂಡಿರುತ್ತವೆ. ಇದಕ್ಕಾಗಿಯೇ ನಾವು ಅಭ್ಯಾಸ ಮಾಡುವುದು. ಹೆಚ್ಚೆಚ್ಚು ಕಲಿತು, ಸಾಧನೆ ಮಾಡಿದಂತೆಲ್ಲಾ ನಿಮ್ಮ ಬೆರಳುಗಳು ಹೆಚ್ಚೆಚ್ಚು ಕೌಶಲವನ್ನು, ಸಾಮರ್ಥ್ಯವನ್ನು ಪಡೆದುಕೊಳ್ಳುತ್ತವೆ. ಬೆರಳುಗಳ ಸಾಧ್ಯತೆಗಳೂ ಹೆಚ್ಚುತ್ತವೆ. ಸಾಮರ್ಥ್ಯ ಹೆಚ್ಚಾದಂತೆ, ಕಲ್ಪನೆಗಳು ಬೆಳೆಯುತ್ತವೆ. ನೀವು ಔತ್ತಮ್ಯದ ಕಡೆಗೆ ಹೋದಷ್ಟೂ ಹೆಚ್ಚೆಚ್ಚು ಕಾಣಿಸಲು ಪ್ರಾರಂಭವಾಗುತ್ತದೆ. ಒಂದು ಇನ್ನೊಂದನ್ನು ಹೆಚ್ಚಿಸುತ್ತದೆ. ಇನ್ನಷ್ಟನ್ನು ಕಾಣುವ ತವಕ ಉಂಟಾಗುತ್ತದೆ. ಇದಕ್ಕೆ ಕೊನೆಯೇ ಇಲ್ಲ. ಈ ಕ್ರಿಯೆಯೇ ತುಂಬ ತೃಪ್ತಿಯನ್ನು, ಒಂದು ಪೂರ್ಣತೆಯ ಭಾವವನ್ನು ತಂದುಕೊಡುವಂಥದ್ದು. ನಾವೆಲ್ಲಾ ಹಾತೊರೆಯುವುದು ಈ ಔತ್ತಮ್ಯಕ್ಕಾಗಿಯೇ. ಕಾಳಿದಾಸ, ಶೇಕ್ಸ್‌ಪಿಯರ್ ಎಲ್ಲಾ ಬಯಸಿದ್ದು ಈ ಔತ್ತಮ್ಯವನ್ನೇ ಕಣ್ರೀ, ಸ್ವಂತಿಕೆಯನ್ನಲ್ಲ.''

"ಈ ರಿಯಾಜ್ ಎನ್ನುವುದು ಪ್ರತಿಯೊಬ್ಬ ಸಂಗೀತಗಾರ ಮತ್ತು ವಿದ್ಯಾರ್ಥಿಗೆ ಅಪ್ಪಟ ಖಾಸಗಿ ಕ್ಷಣ. ಇಲ್ಲಿ ಅವರು ತುಂಬಾ ಪ್ರೀತಿ ಮತ್ತು ತಾಳ್ಮೆಯಿಂದ ಪ್ರತಿಯೊಂದು ಸುಕ್ಕನ್ನೂ ಕೊಡವಿ ಸರಿಪಡಿಸಿಕೊಳ್ಳುತ್ತಾರೆ. ತಮ್ಮಲ್ಲಿನ ಕೌಶಲ, ಸಾಮರ್ಥ್ಯ ಹಾಗೂ ತಂತ್ರಗಾರಿಕೆಯನ್ನು ಉಜ್ಜಿ ಉಜ್ಜಿ ಹೊಳಪು ನೀಡುತ್ತಾರೆ. ರಿಯಾಜ್ ಅಂದರೆ ನಮಗೆ ನಾವೇ ಪ್ರತಿಬಂಧಕಗಳನ್ನು ಹಾಕಿಕೊಂಡು ಅದನ್ನು ಯಶಸ್ವಿಯಾಗಿ ಒಂದರ ನಂತರ ಮತ್ತೊಂದನ್ನು ದಾಟುವ ಪ್ರಕ್ರಿಯೆ. ಇದು ಅಂತ್ಯವಿಲ್ಲದ ಪ್ರಕ್ರಿಯೆ. ಇದು ನಮ್ಮ ಸೃಜನಶೀಲ ಸಾಧ್ಯತೆಗಳನ್ನು ಹುಡುಕಾಡುವ ಸ್ಥಳ. ಕೇವಲ ಊಹೆ ಅಥವಾ ಕಲ್ಪನೆಗಳಿಗೆ ಒಂದು ನಿಷ್ಕೃಷ್ಟತೆಯನ್ನು ತರುವ ಜಾಗ. ರಿಯಾಜ್ ಕ್ರಮೇಣ ಕಲಾವಿದನ ಕಲ್ಪನೆಯನ್ನು ವಿಸ್ತರಿಸುತ್ತಾ ಹೋಗುತ್ತದೆ. ಇದು ಒಂದು ಸಣ್ಣ ಬೆಣ್ಣೆಯ ಉಂಡೆಯನ್ನು ದೊಡ್ಡ ತುಂಡು ಬ್ರೆಡ್ ಮೇಲೆ ಮುಕ್ಕಾಗದಂತೆ ಹರಡುತ್ತಾ ಹೋಗುವುದು. ಏನೋ ಒಂದು ಹೊಸದನ್ನು ಮಾಡೋಕ್ಕೆ ಅಂತ ಹೊರಡ್ತೀವಿ. ಕೆಲವು ಸರ್ತಿ ಸಿಕ್ಕೇ ಬಿಡುತ್ತೆ ಮತ್ತೆ ಕೆಲವು ಸರ್ತಿ, ಇನ್ನೇನು ಸಿಕ್ಕೇ ಬಿಡ್ತು ಅನ್ನುವಾಗ ಹೊರಟು ಹೋಗುತ್ತೆ. ಆದರೆ ಆ ಪ್ರಯತ್ನದಲ್ಲಿಯೇ ಎಂಥ ಖುಷಿ ಇರುತ್ತೆ ಅಲ್ವಾ?'' ಅಂತ ಒಮ್ಮೆ ಹೀಗೇ ಸುಮ್ಮನೆ ಮಾತನಾಡುವಾಗ ಹೇಳಿದ್ದರು. ಶೋಧದ ಫಲಕ್ಕೆ ಬದಲಾಗಿ, ಆ ಪ್ರಕ್ರಿಯೆಯನ್ನೇ ಸಂಭ್ರಮಿಸುತ್ತಿದ್ದ ಅನನ್ಯವಾದ ಮನಃಸ್ಥಿತಿ ಅವರದು.

ಅವರ ಶಿಷ್ಯ ಸಚಿನ್ ಹಂಪಿ ಹೇಳುವಂತೆ ಈ ಮನಃಸ್ಥಿತಿಯಿಂದಾಗಿ "ಅವರು ತಮ್ಮ ಗುರು ಅಲಿ ಅಕ್ಬರ್ ಖಾನ್ ಸಾಹೇಬರು 20 ವರ್ಷಗಳ ಹಿಂದೆ ನುಡಿಸುವುದನ್ನು ನಿಲ್ಲಿಸಿ, ಬಿಟ್ಟುಹೋಗಿದ್ದ ಸಂಗೀತವನ್ನು ಮತ್ತಷ್ಟು ಮುಂದಕ್ಕೆ ಒಯ್ದರು. ನಿರಂತರ ಅಭ್ಯಾಸ, ಚಿಂತನೆ, ಸಂಗೀತದ ಮತ್ತು ತನ್ನತನದ ದಣಿವಿಲ್ಲದ ಹುಡುಕಾಟದ ಮೂಲಕ ಆ ಸಂಗೀತಕ್ಕೆ ಹೊಸ ಹೊಸ ಆಯಾಮಗಳನ್ನು ನೀಡಿ ಬೆಳೆಸಿದರು. ಅವರ ದೇಹಕ್ಕೆ ವಯಸ್ಸಾಗಿತ್ತು. ಆದರೆ ಅವರ ಬುದ್ಧಿ, ಮನಸ್ಸು ಅವರ ತಲೆಮಾರಿನ ಹಾಗೂ ಈ ತಲೆಮಾರಿನ ಉಳಿದೆಲ್ಲರಿಗಿಂತಲೂ ತುಂಬಾ ಮುಂದಕ್ಕೆ ಮತ್ತು ಆಧುನಿಕವಾಗಿ ಆಲೋಚಿಸಿತ್ತು. ಅದೇ ಅವರಿಗೂ ಮತ್ತು ಈಗ ಇರುವ ಉಳಿದೆಲ್ಲಾ ಸರೋದ್‌ವಾದಕರಿಗೂ ಇರುವ ವ್ಯತ್ಯಾಸ. ಈ ಹನ್ನೆರಡು ವರ್ಷಗಳಿಂದ ನಾನು ಗಮನಿಸಿದಂತೆ ದಿನಾ ಬೆಳಗ್ಗೆ ಅವರು ರಿಯಾಜ್ ಪ್ರಾರಂಭಿಸುತ್ತಿದ್ದುದು ನಟಭೈರವ್ ರಾಗದೊಂದಿಗೆ. ಈ ಹನ್ನೆರಡು ವರ್ಷಗಳಲ್ಲಿ ನನಗೆ ಎಂದೂ ಅದೇ ನಟಭೈರವ್ ಕೇಳುತ್ತಿದ್ದೇನೆ ಅಂತ ಅನ್ನಿಸಿರಲಿಲ್ಲ. ಅವರು ಪ್ರತಿದಿನವೂ ಒಂದು ಹೊಸ ಚಾಲೆಂಜನ್ನು ಮುಂದಿಟ್ಟುಕೊಂಡು ಅದನ್ನು ಬಿಡಿಸುತ್ತಾ ಮುಂದಕ್ಕೆ ಹೋಗುತ್ತಿದ್ದರು. ಇದು ಅವರನ್ನು ತುಂಬಾ ಎತ್ತರಕ್ಕೆ ಕರೆದೊಯ್ದಿತ್ತು. ಈ ಮಹತ್ತರವಾದ ಅಂಶದಿಂದಾಗಿ ಇವರದೇ ಪರಂಪರೆಯ ಉಳಿದವರು ಹಾಗೂ ಇವರು ಬಿಟ್ಟು ಹೋಗಿರುವ ಪರಂಪರೆ ಇವುಗಳ ನಡುವೆ ಕಂದಕವೊಂದು ಸೃಷ್ಟಿಯಾಗಿಬಿಟ್ಟಿದೆ.''

ಇಷ್ಟೇ ತೀವ್ರತೆಯಿಂದ ಅವರು ಸಿನಿಮಾ ಕ್ಷೇತ್ರದಲ್ಲಿಯೂ ಸಂಗೀತದ ಸಾಧ್ಯತೆಗಳನ್ನು ಶೋಧಿಸಿದರು. ಅವರು 'ಸಂಸ್ಕಾರ' ಚಿತ್ರಕ್ಕೆ ಮಾಡಿದ ಸಂಗೀತ ಕನ್ನಡ ಚಿತ್ರರಂಗದ ಹಿನ್ನೆಲೆ ಸಂಗೀತ ವಿಭಾಗದಲ್ಲಿ ಹೊಸದೊಂದು ಅಧ್ಯಾಯ ತೆರೆಯಿತು. ಇವಲ್ಲದೆ ಲಂಕೇಶರ 'ಪಲ್ಲವಿ', 'ಖಂಡವಿದೆಕೋ